


ಹುಟ್ಟಿಕೊಂಡಿದ್ದ 'ಐಸಿಸ್' ಎನ್ನುವ ಏಜೆನ್ಸಿಯ ಬಾಂಬು, ಮದ್ದುಗುಂಡುಗಳ ಪ್ರವಾಹದಿಂದ ಸಿರಿಯಾದ ಜನತೆ ಮುಕ್ತಿ ಪಡೆದದ್ದು ಕೊರೊನಾ ಹೊತ್ತಲ್ಲಿ. ಕೊರೊನಾ ವಿಶ್ವದ ದೊಡ್ಡ ಆರ್ಥಿಕ ಶಕ್ತಿಗಳನ್ನೂ ಅಲುಗಾಡಿಸಿದ್ದರಿಂದ ಭಯೋತ್ಪಾದನೆಗೆ ಹಣದ ಹರಿವು ನಿಂತು ಐಸಿಸ್ ಕೂಡ ಬಂದ್ ಆಗಿತ್ತು. ಸಿರಿಯಾ ಜನತೆ ನೆಮ್ಮದಿ ಅಂತ ಕಂಡಿದ್ದು ಕೊರೊನಾ ಹೊತ್ತಲ್ಲೇ.

'ಪ್ರಕೃತಿ ಸಣ್ಣದಾಗಿ ಮೈಕೊಡವಿದರೂ ಮನುಷ್ಯ ಸೃಷ್ಟಿಯ ಧರ್ಮ, ಜಾತಿ, ಪ್ರತಿಷ್ಠೆ, ಅಹಂನ ವಿಕೃತಿಗಳು ಹೇಗೆ ಸ್ಥಗಿತಗೊಂಡು ಬಿಡುತ್ತವೆ. ನಮಗೆಲ್ಲಾ ಸಾವಿನ ಕನ್ನಡಿ ಎದುರಿಗೆ ನಿಂತಂತೆ ಆಗುತ್ತದೆ ಅಲ್ಲವಾ?' ಎಂದು ನನ್ನ ಸಾಹಿತಿ ಮಿತ್ರ ನೆಲ್ಲುಕುಂಟೆ ವೆಂಕಟೇಶ್‌ಗೆ ಒಂದು ಮೆಸೇಜ್ ಹಾಕಿ ಆ ಗುಂಗಲ್ಲೇ ಹಾಸಿಗೆಗೆ ಮೈಹಾಸಿದ್ದೆ. 'ನೀವೂ ಉತ್ತರಕಾಂಡ ಮೇಘಸ್ಫೋಟ ಆದಾಗ ರೆಸ್ಕ್ಯೂ ಟೀಮ್ ಲೀಡ್ ಮಾಡಿದ್ರಲ್ವಾ ಬಾಸು' ಎಂದು ಆ ಕಡೆಯಿಂದ ವೆಂಕಟೇಶ್ ಮೆಸೇಜ್ ಹಾಕಿದರು. 'ಹೌದಲ್ವಾ...' ಆ ದಿನಗಳು ಇನ್ನೂ ಕಣ್ಣಿಗೆ ಕಟ್ಟಿದಂತಿವೆ.

ಅವತ್ತು ಜೂನ್ 2013. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಆಗಷ್ಟೇ ಚುನಾವಣೆ ಮುಗಿದು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದ ಹೊಸ ಸರ್ಕಾರ ನನ್ನನ್ನು ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯಾಗಿ ವರ್ಗಾಯಿಸಿತ್ತು. ಅವತ್ತು ಮನೆ ಸೇರುವ ಹೊತ್ತಿಗೆ ರಾತ್ರಿ ಎಂಟಾಗಿತ್ತು. ಹೊಸ ಜವಾಬ್ದಾರಿ, ಹೊಸ ಹುದ್ದೆ ಬಗ್ಗೆ ಚರ್ಚಿಸುತ್ತಲೇ ಪತ್ನಿ ಮಾಡಿಕೊಡುತ್ತಿದ್ದ ಚಪಾತಿ ಜೊತೆಗೆ ಮಂಡ್ಯದ ತುಪ್ಪ ಲೆಕ್ಕಕ್ಕಿಲ್ಲದಂತೆ ಹೊಟ್ಟೆಗಿಳಿಯುತ್ತಿತ್ತು. ಈ ಸ್ವಾದಕ್ಕೆ ಅಡ್ಡಿಯಾಗಿದ್ದು ಫೋನ್ ಕಾಲ್. ಹಾಲ್‌ನಲ್ಲಿ ಇಟ್ಟದ್ದ ಫೋನ್ ಎತ್ತಿಕೊಂಡು ಬಂದ ಮಗ, 'ಅಪ್ಪಾ, ನವೀನ್ ರಾಜ್ ಸಿಂಗ್ ಐ.ಎ.ಎಸ್ ಎನ್ನುವರಿಂದ ಫೋನ್ ಬರುತ್ತಿದೆ' ಎಂದು ಮೊಬೈಲನ್ನು ಕೈಗಿಟ್ಟ. ನಾನು ಹಾಸನದಲ್ಲಿ ಎರಡು ವರ್ಷ ಸಹಾಯಕ ಆಯುಕ್ತನಾಗಿ ಕೆಲಸ ಮಾಡುತ್ತಿದ್ದ ಹೊತ್ತಲ್ಲಿ ನವೀನ್ ರಾಜ್